ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 01(203)

ಸದಸ್ಯರ ಹೆಸರು : ಶ್ರೀ ಪ್ರತಾಪ ಚಂದ್ರ ಶೆಟ್ಟಿ

(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 13.09.2021

ಉತ್ತರಿಸುವವರು : ಅರಣ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಲ್ಲಿ ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಯ ಮತ್ತು ರಸ್ತೆಯ ಮಾರ್ಜಿನ್‌ಗಳಲ್ಲಿ ಅರಣ್ಯೀಕರಣಕ್ಕಾಗಿ ನಡೆಸಲಾದ ವೆಚ್ಚವೆಷ್ಟು; (ವರ್ಷವಾರು, ಜಿಲ್ಲಾವಾರು, ತಾಲ್ಲೂಕುವಾರು, ಮಾಹಿತಿಯನ್ನು ನೀಡುವುದು) | ಕಳೆದ 5 ವರ್ಷಗಳಲ್ಲಿ ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಯ ಮತ್ತು ರಸ್ತೆಯ ಮಾರ್ಜಿನ್ ಗಳಲ್ಲಿ ಅರಣ್ಯೀಕರಣಕ್ಕಾಗಿ ನಡೆಸಲಾದ ವೆಚ್ಚದ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ. |
| ಆ) | ವಿದ್ಯುತ್ ಕೇಬಲ್‌ಗಳನ್ನು ನೆಲದ ಮೇಲ್ಭಾಗದಲ್ಲಿ ಕಂಬಗಳ ಮೂಲಕ ಹಾಗೂ ನೆಲದ ಅಡಿಯಲ್ಲಿ ಕೇಬಲ್‌ಗಳ ಮೂಲಕ ಹಾಕುವ ಬಗ್ಗೆ ಅರಣ್ಯ ಇಲಾಖೆಯಿಂದ ಮಾರ್ಗಸೂಚಿಯನ್ನು ಹೊರಡಿಸಲಾಗಿದೆಯೇ; (ಹಾಗಿದ್ದಲ್ಲಿ, ಮಾರ್ಗಸೂಚಿಯ ಪ್ರತಿಯನ್ನು ಒದಗಿಸುವುದು) | ವಿದ್ಯುತ್ ಕೇಬಲ್‌ಗಳನ್ನು ಹಾಕುವ ಬಗ್ಗೆ ಅರಣ್ಯ ಇಲಾಖೆಯಿಂದ ಯಾವುದೇ ಮಾರ್ಗಸೂಚಿ ಹೊರಡಿಸಿರುವುದಿಲ್ಲ. ಆದರ ಈ ಬಗ್ಗೆ ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಸಚಿವಾಲಯದಿಂದ ದಿನಾಂಕ:05.05.2014 ರಂದು ಮಾರ್ಗಸೂಚಿ ಹೊರಡಿಸಿರುತ್ತಾರೆ. (ಅನುಬಂಧ–2 ರಲ್ಲಿ ಒದಗಿಸಿದೆ)<br><br>ಮುಂದುವರಿದು, ಕೇಬಲ್ ಗಳನ್ನು ಅಳವಡಿಸುವ ಸಂದರ್ಭದಲ್ಲಿ ಮರ ಕಟಾವಣೆಗೊಳಿಸಲು ಅನುಮತಿ ನೀಡಿದಲ್ಲಿ, ಕಡಿಯುವ ಒಂದು ಮರದ ಬದಲಿಗೆ 02 ಗಿಡಗಳನ್ನು ನೆಟ್ಟು ಪೋಷಿಸಬೇಕೆಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯಪಡೆ ಮುಖ್ಯಸ್ಥರು) ಬೆಂಗಳೂರು ಇವರ ಪತ್ರ ಸಂಖ್ಯೆ: ಎ5(4)/Misc/ಸಿಆರ್.1/2010-11, ದಿನಾಂಕ:24.06.2010ರ ಆದೇಶದಲ್ಲಿ ಸೂಚಿಸಿರುತ್ತಾರ (ಅನುಬಂಧ-3 ರಲ್ಲಿ ಒದಗಿಸಿದೆ). ಸರ್ಕಾರದ ಆದೇಶ ಸಂಖ್ಯೆ: ಎಫ್ ಇಇ 168 ಎಫ್ ಡಿಪಿ 2017, ದಿನಾಂಕ:06.12.2018 ರಲ್ಲಿ ರಸ್ತೆ ಅಗಲೀಕರಣದಲ್ಲಿ ಮರಗಳ ಕಟಾವಣೆ ಕುರಿತು ಮಾರ್ಗಸೂಚನೆ ನೀಡಲಾಗಿದೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಎಫ್ ಇಇ 168 ಎಫ್ ಡಿಪಿ 2017, ದಿನಾಂಕ:08.10.2020 ರಲ್ಲಿ ರಸ್ತೆ ಇಕ್ಕೆಲಗಳಲ್ಲಿ ಮರ ಕಟಾವಣೆ ಬದಲಿಗೆ ಗಿಡಗಳನ್ನು ಬೆಳಸಲು ಪರಿಷ್ಕೃತ ದರಗಳನ್ನು ನಿಗದಿಗೊಳಿಸಿರುತ್ತಾರೆ (ಅನುಬಂಧ-4 ರಲ್ಲಿ ಒದಗಿಸಿದೆ). |

.....2

| | | |
|---|---|---|
| ಇ) | ಕರ್ನಾಟಕ ನೀರಾವರಿ ನಿಗಮದಿಂದ ನಿರ್ವಹಿಸಲಾಗುತ್ತಿರುವ ಸೌಕೂರ ಏತ ನೀರಾವರಿ ಯೋಜನೆಯಲ್ಲಿ ಅಪಾರ ಪ್ರಮಾಣದ ಮರಗಳನ್ನು ಕಟಾವು ಮಾಡಿ ವಿದ್ಯುತ್ ಕೇಬಲ್‌ಗಳನ್ನು ಹಾಕುವುದಕ್ಕೆ ಇಲಾಖೆಯಿಂದ ಅನುಮತಿಯನ್ನು ಪಡೆಯಲಾಗಿದೆಯೇ; (ಅನುಮತಿಯ ಪ್ರತಿಯನ್ನು ಒದಗಿಸುವುದು) | ಸೌಕೂರು ಏತ ನೀರಾವರಿ ಯೋಜನೆಯಲ್ಲಿ ವಿದ್ಯುತ್ ಕೇಬಲ ಹಾಕುವ ಬಗ್ಗೆ ಅಡಚಣೆಯಾದ ಮರಗಳನ್ನು ಕತ್ತರಿಸಲು ಅನುಮತಿ ಕೋರಿ ವಾರಾಹಿ ನೀರಾವರಿ ನಿಗಮದವರು ದಿನಾಂಕ:10.08.2021 ರಂದು ಕುಂದಾಪುರ ವಲಯ ಅರಣ್ಯಾಧಿಕಾರಿಗಳ ಕಛೇರಿಗೆ ಅರ್ಜಿ ಸಲ್ಲಿಸಿದ್ದು, ಪರಿಶೀಲನಾ ಹಂತದಲ್ಲಿ ಬಾಕಿ ಇರುತ್ತದೆ. ಈ ಬಗ್ಗೆ ಮರಗಳ ಕಟಾವಣೆಗೆ ಇಲಾಖೆಯಿಂದ ಇದುವರೆಗೆ ಯಾವುದೇ ಅನುಮತಿ ನೀಡಿರುವುದಿಲ್ಲ. ಆದರೆ ವಿದ್ಯುತ್ ಕೇಬಲ್ ಗಳನ್ನು ಕೊಂಡೊಯ್ಯಲು 21 ಮರಗಳ ಗೆಲ್ಲುಗಳನ್ನು ಇಲಾಖಾ ಅನುಮತಿ ಪಡೆಯದೇ ಕಡಿದಿದ್ದು ಹಾಗೂ ಸದರಿ ಕಡಿತಲೆ ಸಂದರ್ಭದಲ್ಲಿ ಕೆಲವೊಂದು ಮರಗಳ ಸಂಪೂರ್ಣ ತಲೆಭಾಗ ಕಡಿದಿರುವುದು ಕಂಡು ಬಂದಿರುತ್ತದೆ. ಹೀಗೆ ಅಕ್ರಮವಾಗಿ ಗೆಲ್ಲುಗಳನ್ನು ಕಡಿದ ಬಗ್ಗೆ ಗುತ್ತಿಗೆದಾರರ ವಿರುದ್ಧ ಪ್ರಥಮ ಮಾಹಿತಿ ವರದಿ (FIR) ನ್ನು ದಾಖಲಿಸಲಾಗಿದೆ (ಅನುಬಂಧ-5 ರಲ್ಲಿ ಒದಗಿಸಿದೆ). |
| ಈ) | ವಿದ್ಯುತ್ ಕೇಬಲ್‌ಗಳನ್ನು ಕೊಂಡೊಯ್ಯಲು ಕಟಾವು ಮಾಡಲಾದ ಮರಗಳ ಮೌಲ್ಯವನ್ನು ನಿರ್ಧರಣೆ ಮಾಡಲಾಗಿದೆಯೇ; (ಮೌಲ್ಯ ನಿರ್ಧರಣೆಯ ಪ್ರತಿಯನ್ನು ಹಾಗೂ ಈ ಕುರಿತು ಇಲಾಖೆಗೆ ಹಣ ಪಾವತಿಸಿದ್ದಲ್ಲಿ ಅದರ ಪ್ರತಿಯನ್ನು ಒದಗಿಸುವುದು) | ವಿದ್ಯುತ್ ಕೇಬಲ್ ಗಳನ್ನು ಕೊಂಡೊಯ್ಯಲು ಅಕ್ರಮವಾಗಿ 21 ಮರದ ಗೆಲ್ಲುಗಳನ್ನು ಕಡಿದಿದ್ದು, ಇದರಿಂದ 2 ಘ.ಮೀ ಕಟ್ಟಿಗೆ ದೊರೆತಿದ್ದು, ಇದರ ಮೌಲ್ಯ ಸುಮಾರು ರೂ.4,404/- ಆಗಿರುತ್ತದೆ.<br>ಮರಗಳೆಲ್ಲವನ್ನು ಕಡಿದು ನಿಂತಿರುವ 21 ಮರದ ಮೌಲ್ಯವನ್ನು ನಿರ್ಧರಿಸಲಾಗಿದ್ದು, ಸದರಿ 21 ಮರಗಳ ಮೌಲ್ಯ ರೂ.1,06,317/- ಆಗಿರುತ್ತದೆ (ಅನುಬಂಧ-6 ರಲ್ಲಿ ಒದಗಿಸಿದೆ).<br>ಈ ಬಗ್ಗೆ ದಾಖಲಾದ ಅರಣ್ಯ ತಕ್ಷೀರು ವಿಚಾರಣಾ ಹಂತದಲ್ಲಿರುತ್ತದೆ. ವಿಚಾರಣಾ ವರದಿ ಅನುಸಾರ ಸಂಬಂಧಿಸಿದ ಆರೋಪಿಗಳಿಂದ ದಂಡ ಹಾಗೂ ಕಡಿದ ಸೊತ್ತಿನ ಮೌಲ್ಯವನ್ನು ಪಾವತಿಸಿಕೊಳ್ಳಲು ಕ್ರಮಕೈಗೊಳ್ಳಲಾಗುವುದು. |
| ಉ) | ನೆಲದಡಿಯಲ್ಲಿ ಕೇಬಲ್‌ಗಳನ್ನು ಕೊಂಡೊಯ್ಯಲು ಅವಕಾಶವಿದ್ದರೂ ಅಪಾರ ಪ್ರಮಾಣದ ಮರಗಳನ್ನು ಕಟಾವು ಮಾಡಿದವರ ಮೇಲೆ ಇಲಾಖೆಯಿಂದ ಯಾವ ಕ್ರಮ ವಹಿಸಲಾಗಿದೆ; ಸಾರ್ವಜನಿಕರಿಂದ ದೂರುಗಳಿದ್ದರೂ ಇಲಾಖೆಯು ಜಾಣಮೌನ ವಹಿಸಲು ಕಾರಣವೇನು? (ಸಂಬಂಧಿಸಿದ ಗುತ್ತಿಗೆದಾರರು ಮತ್ತು ಇಲಾಖೆಯಿಂದ ದಂಡ ವಸೂಲಾತಿಗೆ ಇಲಾಖೆಯಿಂದ ಕೈಗೊಂಡ ಕಾನೂನು ಕ್ರಮದ ಮಾಹಿತಿ ನೀಡುವುದು) | ಸೌಕೂರು ಏತ ನೀರಾವರಿ ಯೋಜನೆಗೆ ವಿದ್ಯುತ್ ಕೇಬಲ್ ನ್ನು ಅಳವಡಿಸಲು ಉದ್ದೇಶಿಸಿರುವ ಸುಮಾರು 08 ಕಿ.ಮೀ ದೂರದವರೆಗಿನ ಕಾಮಗಾರಿಯ ಬಗ್ಗೆ ವಿದ್ಯುತ್ ಲೈನ್ ಗುತ್ತಿಗೆದಾರರಾದ ಶ್ರೀ ಸತೀಶ ಎಂ.ನಾಯಕ ಬಿನ್ ಮೂಡರ ನಾಯ್ಕ, ನಂದನವನ, ಬೀಜಾಡಿ ಗ್ರಾಮ, ಕೋಟೇಶ್ವರ ಎನ್ನುವವರು ಗುಲ್ವಾಡಿ ಡ್ಯಾಮ್ ನಿಂದ ಸುಮಾರು ಒಂದು ಕಿ.ಮೀ., ಉದ್ದದವರೆಗೆ 21 ಮರದ ಗೆಲ್ಲುಗಳನ್ನು ಇಲಾಖಾ ಅನುಮತಿ ಪಡೆಯದೇ ಅಕ್ರಮವಾಗಿ ಕಡಿದಿರುತ್ತಾರೆ. |

| | | |
|---|---|---|
| | | ಈ ಬಗ್ಗೆ ಕ್ಷೇತ್ರ ಸಿಬ್ಬಂದಿಯವರು ಸದರಿ ವಿದ್ಯುತ್ ಲೈನ್ ಎಳೆಯುತ್ತಿರುವ ಕಾಮಗಾರಿಯನ್ನು ಒಂದು ಕಿ.ಮೀ.,ಗೆ ಸ್ಥಗಿತಗೊಳಿಸಿ ಅಕ್ರಮವಾಗಿ ಮರಗಳೆಲ್ಲವನ್ನು ಕಡಿದ ಬಗ್ಗೆ ಗುತ್ತಿಗೆದಾರರ ವಿರುದ್ಧ ಪ್ರಥಮ ಮಾಹಿತಿ ವರದಿ (FIR) ನ್ನು ವಲಯ ಅರಣ್ಯಾಧಿಕಾರಿ, ಕುಂದಾಪುರ ವಲಯದಲ್ಲಿ ಅರಣ್ಯ ತಕ್ಷೀರು ಸಂಖ್ಯೆ: 27/2021-22, ದಿನಾಂಕ: 08.09.2021 ರಂತೆ ದಾಖಲಿಸಿಕೊಳ್ಳಲಾಗಿದೆ (ಸ್ಥಳ ಛಾಯಾಚಿತ್ರವನ್ನು ಅನುಬಂಧ-7 ರಲ್ಲಿ ಒದಗಿಸಲಾಗಿದೆ).<br><br>ಗುತ್ತಿಗೆದಾರರ ವಿರುದ್ಧ ದಾಖಲಾದ ಪ್ರಕರಣವು ವಿಚಾರಣಾ ಹಂತದಲ್ಲಿದ್ದು, ಪೂರ್ಣ ಪ್ರಮಾಣದ ತನಿಖಾ ವರದಿ ಪಡೆದು ಸಂಬಂಧಿಸಿದ ಆರೋಪಿಯ ವಿರುದ್ಧ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು. |

ಸಂಖ್ಯೆ: ಅಪಜೀ 62 ಎಫ್ ಟಿಎಸ್ 2021

(ಉಮೇಶ್ ವಿ.ಕತ್ತಿ)
ಅರಣ್ಯ, ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು